1ನೇ ಅಪರ ಮುಖ್ಯ ಮಹಾನಗರ ದಂಡಾಧಿಕಾರಿಗಳ ನ್ಯಾಯಾಲಯ, ಬೆಂಗಳೂರು.

ಸಿಸಿ ನಂ.5473/2012

| | | | |
|---|---|---|---|
| ಹೆಸರು | : | ಅಶೋಕ್.ವಿ. | ಪ್ರಾಸಾಃ 11 |
| ತಂದೆಯ ಹೆಸರು | : | ವಸಂತರಾಜ್ | ಚಾಸಾಃ 64 |
| ವಯಸ್ಸು | : | 50 ವರ್ಷ | |
| ಉದ್ಯೋಗ | : | ಖಾಸಗಿ ನೌಕರ | |
| ವಾಸ | : | ಸುಬ್ರಮಣ್ಯ ನಗರ, ಬೆಂಗಳೂರು. | |

ದಿಃ 27.01.2021 ರಂದು ಪ್ರಮಾಣೀಕರಿಸಲಾಯಿತು.

ಮುಖ್ಯ ವಿಚಾರಣೆಃ ಹಿರಿಯ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ

ಆರೋಪಿಗಳು ಗೊತ್ತು. ಆರೋಪಿಗಳು ಬಿಡದಿಯ ಬಳಿ ಭೀಮನಹಳ್ಳಿ ಶ್ರೀ ಎನ್‌ಕ್ಲೇವ್ ಎಂಬ ಲೇ ಔಟ್ ಮಾಡುತ್ತೇವೆಂದು ಪ್ರಕಟಿಸಿದ್ದು, ಅದರಂತೆ ಅಲ್ಲಿ ನಾನು ಒಂದುದ ನಿವೇಶನವನ್ನು ಖರೀದಿ ಮಾಡಲು ತೀರ್ಮಾನಿಸಿದ್ದೆವು. ಈ ಸಂಬಂಧವಾಗಿ ಸದರಿ ಸಂಸ್ಥೆಯವರು ಸದರಿ ನಿವೇಶನವನ್ನು ತೋರಿಸಿರುತ್ತಾರೆ. ಪ್ರತಿ ಚದರ ಅಡಿಗೆ 720 ರೂ ಯಂತೆ ಮಾರಾಟ ಮೂಡುವುದಾಗಿ ಆರೋಪಿಗಳು ಒಪ್ಪಿಕೊಂಡಿರುತ್ತಾರೆ. ಈ ಪ್ರಕಾರ ಸದರಿ ನಿವೇಶನಕ್ಕೆ ಮಾರಾಟ ಬೆಲೆ ನಿಗಧಿ ಮಾಡಿ ಕರಾರು ಪತ್ರವನ್ನು ಮಾಡಿಸಿಕೊಳ್ಳಲು ಬರುವಂತೆ ನನಗೆ ತಿಳಿಸಿರುತ್ತಾರೆ. ಅದರಂತೆ ದಿಃ 16.10.2006 ರಂದು ನನಗೆ ಕರಾರು ಪತ್ರವನ್ನು ಬರೆದುಕೊಟ್ಟಿರುತ್ತಾರೆ. ಸದರಿ ಕರಾರು ಪತ್ರದಂತೆ ಮುಂಗಡ ಹಣವಾಗಿ ಒಟ್ಟು 2,70,000/- ಹಣವನ್ನು ಸದರಿ ಸಂಸ್ಥೆಯವರಿಗೆ ಪಾವತಿ ಮಾಡಿದ್ದೇನೆ. ಸದರಿ ಹಣಕ್ಕೆ ಸಂಸ್ಥೆಯವರು ರಸೀದಿಯನ್ನು ಕೊಟ್ಟಿರುತ್ತಾರೆ. ಒಂದು ಪಕ್ಷ ನಿವೇಶನ ಬೇಡವಾದರೆ ಬಡ್ಡಿ ಸಹಿತ ಮುಂಗಡ ಹಣವನ್ನು ವಾಪಸ್ ಕೊಡುತ್ತೇವೆಂದು

ತಿಳಿಸಿರುತ್ತಾರೆ. ಆ ನಂತರ ಒಂದು ವರ್ಷದ ನಂತರ ಸದರಿ ಸಂಸ್ಥೆಯ ಕಚೇರಿಗೆ ಭೇಟಿ ಕೊಡಲು ಹೋದಾಗ ಅಲ್ಲಿ ಯಾರು ಇರಲಿಲ್ಲ, ಆದ್ದರಿಂದ ಸದರಿ ಸಂಸ್ಥೆಯವರು ನನಗೆ ಯಾವುದೇ ನಿವೇಶನವನ್ನಾಗಲೀ, ಕೊಟ್ಟಂತಹ ಹಣವನ್ನಾಗಲೀ ಕೊಟ್ಟಿರುವುದಿಲ್ಲ. ಈ ರೀತಿ ಸದರಿ ಸಂಸ್ಥೆಯವರು ನನಗೆ ಮೋಸ ಮಾಡಿರುತ್ತಾರೆ. ಆ ನಂತರ ಪೊಲೀಸ್ ಠಾಣೆಯಲ್ಲಿ ಆರೋಪಿಗಳ ವಿರುದ್ಧ ದೂರನ್ನು ಸಲ್ಲಿಸಿದ್ದೇನೆ. ದಿಃ 17.10.2006 ರಂದು ಆದ ಕರಾರು ಪತ್ರವನ್ನು ನಿಪಿ.25 ಎಂದು, ವಿ.ಭಾಸ್ಕರ್ ರೆಡ್ಡಿ ಎಂದು 1ನೇ ಆರೋಪಿಯ ಸಹಿಯನ್ನು ನಿಪಿ.25(ಎ) ಎಂದು, ಸಾಕ್ಷಿಯ ಸಹಿಯನ್ನು ನಿಪಿ.25(ಬಿ) ಎಂದು ಗುರುತಿಸಲಾಯಿತು. ರಸೀದಿಯನ್ನು ನಿಪಿ.26 ಎಂದು, 1ನೇ ಆರೋಪಿಯ ಸಹಿಯನ್ನು ನಿಪಿ.26(ಎ) ಎಂದು ಗುರುತಿಸಲಾಯಿತು. ಪೊಲೀಸ್‌ನವರಿಗೆ ನೀಡಿದ ದೂರನ್ನು ನಿಪಿ.27 ಎಂದು, ಸಾಕ್ಷಿಯ ಸಹಿಯನ್ನು ನಿಪಿ.27(ಎ) ಎಂದು ಗುರುತಿಸಲಾಯಿತು. ಆರೋಪಿಗಳನ್ನು ನೋಡಿ ಸಾಕ್ಷಿ ಗುರುತಿಸಿರುತ್ತಾರೆ.

ಪಾಟಿ ಸವಾಲುಃ- ಆರೋಪಿಗಳ ಪರ ಶ್ರೀ ಕೆಎನ್‌ಎಸ್ ವಕೀಲರಿಂದಃ-

ನನಗೆ ಸೈಟ್‌ಗೆ ಸಂಬಂಧಪಟ್ಟ ದಾಖಲೆಗಳು ಮಂಜೂರಾತಿ ದಾಖಲೆಗಳು ತೋರಿಸಿಲ್ಲ ಮತ್ತು ನಾನು ನೋಡಿಲ್ಲ. ನಿಪಿ.25 ರಲ್ಲಿ ಯಾವ ತಾರೀಖಿನಂದು ನೊಂದಣಿ ಮಾಡಿಸಿಕೊಡುತ್ತೇನೆಂದು ಹೇಳಿಲ್ಲ. ಆರೋಪಿಗಳು ನಿವೇಶನಗಳನ್ನು ಅಭಿವೃದ್ಧಿಪಡಿಸಿಲ್ಲ, ಸಾಕ್ಷಿಯು ಈಗ ಸದ್ಯ ಹೋಗಿ ನೋಡಿಲ್ಲ ಎಂದು ಹೇಳುತ್ತಾರೆ. ಆರೋಪಿ ಯಾವುದೇ ತಪ್ಪು ಮಾಡಿಲ್ಲ ಎಂದರೆ ಸರಿಯಲ್ಲ. ಸರ್ಕಾರದವರು, ಖಾಸಗಿಯವರು ಲೇ ಔಟ್ ಮಾಡುವಂತಿಲ್ಲ ಎಂದು 2007 ರಲ್ಲಿ ಪ್ರಕಟಣೆ ಹೊರಡಿಸಿದ್ದರಿಂದ 1ನೇ ಆರೋಪಿಗೆ ಲೇ ಔಟ್ ಮಾಡಲು ಆಗಿಲ್ಲ ಎಂದರೆ ಸರಿಯಲ್ಲ.

ಪಾಟಿ ಸವಾಲುಃ- 5ನೇ ಆರೋಪಿ ಪರ ಶ್ರೀ ಸಿವಿಎನ್ ವಕೀಲರಿಂದಃ-

ಏನು ಇಲ್ಲ ಎಂದು ತಿಳಿಸಿರುತ್ತಾರೆ.

ಪಾಟಿ ಸವಾಲುಃ- 18 ಮತ್ತು 19ನೇ ಆರೋಪಿಗಳ ಪರ ಶ್ರೀ ಸಿಎನ್ ವಕೀಲರಿಂದಃ-

ಏನು ಇಲ್ಲ ಎಂದು ತಿಳಿಸಿರುತ್ತಾರೆ.

ಮರು-ವಿಚಾರಣೆಃ- ಇಲ್ಲ.

**(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)**

ಓ. ಹೇ. ಕೇ. ಸ. ಇ.

1ನೇ ಅ. ಮು. ಮ. ದಂ. ನ್ಯಾಯಾಲಯ